

## ನಿದ್ರಾಸನದಲ್ಲಿ ಕುಂಭಕರ್ಣ

ರಾವಣನ ಸಹೋದರ ಕುಂಭಕರ್ಣ ರಾಮಾಯಣದಲ್ಲಿ ಬರುವ ಒಬ್ಬ ವಿಶಿಷ್ಟ ವ್ಯಕ್ತಿ. ಸರಸ್ವತಿಯ ನಾಲಗೆಯನ್ನು ಹಿಡಿದ ಪರಿಣಾಮವಾಗಿ ಬ್ರಹ್ಮನಿಂದ 'ಇಂದ್ರಾಸನ'ದ ಬದಲು 'ನಿದ್ರಾಸನ' ಪಡೆದ ನತದೃಷ್ಟ ಈತ. ವರ್ಷದಲ್ಲಿ ಮಲಗಿರುವುದೇ ಹೆಚ್ಚು. ಆರು ತಿಂಗಳಿಗೆ ಒಂದು ದಿನ ಏಳುವ ಈತ ಎದ್ದು ತಕ್ಷಣ ಕಣ್ಣಿಗೆ ಕಂಡದ್ದನೆಲ್ಲಾ ಭಕ್ಷಿಸಿ, ಮತ್ತೆ ಆರು ತಿಂಗಳು ನಿದ್ರೆಗೆ ಜಾರುತ್ತಾನೆ.

ಈ ಚಿತ್ರದಲ್ಲಿರುವುದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪೆನುಕೊಂಡದಲ್ಲಿರುವ ಕುಂಭಕರ್ಣನ ಬೃಹತ್ ವಿಗ್ರಹ. ಇದರ ಉದ್ದ 144 ಅಡಿಯಾದರೆ, ಎತ್ತರ 44 ಅಡಿ. ಅಷ್ಟೇ ಅಲ್ಲದೇ ಇವನ ಡೊಳ್ಳು ಹೊಟ್ಟೆಯಲ್ಲಿ ಒಂದು ಆಡಿಟೋರಿಯಂ ಅನ್ನು ನಿರ್ಮಿಸಲಾಗಿದೆ. ರಾಮ ರಾವಣರ ಯುದ್ಧ ಸಂದರ್ಭದಲ್ಲಿ ರಾವಣನ ಸೈನಿಕರು ಮಲಗಿರುವ ಕುಂಭಕರ್ಣನನ್ನು ಯುದ್ಧಕ್ಕಾಗಿ ಎಚ್ಚರಿಸುವ ಸನ್ನಿವೇಶವನ್ನು ಇಲ್ಲಿ ಚಿತ್ರಿಸಲಾಗಿದೆ.

**-ಉಮಾ ಶಿವಶಂಕರ್, ಶಿವಮೊಗ್ಗ**



## ಕಲ್ಲುಕುಂಡೆ ಬಳ್ಳಿಯ ಕುಕ್ಕೆ

ಈ ಕುಕ್ಕೆಯನ್ನು ಕಲ್ಲುಕುಂಡೆ ಬಳ್ಳಿಯಿಂದ ಹೆಣೆದಿದ್ದು, ಇದು ನದಿ– ಹಳ್ಳಗಳ ಬದಿಯಲ್ಲಿ ಬೆಳೆಯುತ್ತದೆ. ಈ ಬಳ್ಳಿಯನ್ನು ಕಟಾವು ಮಾಡಿ ನೆರಳಲ್ಲಿ ಒಣಗಿಸಿ ಕುಕ್ಕೆಯನ್ನು ತಯಾರಿಸಲಾಗುತ್ತದೆ. ರೈತರು ತಮ್ಮ ಹೊಲಗಳಲ್ಲಿ ಎಡೆಹೊಡೆಯುವಾಗ, ಎತ್ತುಗಳ ಮುಖಕ್ಕೆ ಕಟ್ಟುವ ಪದ್ಧತಿ ಇದೆ. ಒಂದು ಜೊತೆ ಕುಕ್ಕೆಗೆ ರೂ. 40–50 ರವರೆಗೆ ಮಾರಾಟ ಮಾಡಲಾಗುತ್ತದೆ. ಈ ಕುಕ್ಕೆಯ ತಯಾರಿಕೆ ಕೊರವ ಜನಾಂಗದವರ ಉಪಕಸುಬು.

ಚಿತ್ರ - ಬರಹ:

**ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ**

## ಇರುವೆ ಗೂಡು

ಈ ಮಣ್ಣಿನ ಗುಪ್ಪೆ ಇರುವೆಗಳು ವಾಸ ಮಾಡುವ ಸಲುವಾಗಿ ನಿರ್ಮಿಸಿಕೊಂಡಿರುವ ಗೂಡು. ಮಾನವ ಮನೆ ನಿರ್ಮಿಸಿಕೊಂಡಂತೆ ಇರುವೆಗಳು ಕೂಡಾ ತಾವು ವಾಸ ಮಾಡಿಕೊಳ್ಳಲು ಈ ತರಹದ ಗೂಡು ನಿರ್ಮಿಸಿಕೊಳ್ಳುತ್ತವೆ. ತಮ್ಮ ರಕ್ಷಣೆಗೋಸ್ಕರ ಈ ರೀತಿ ನಿರ್ಮಿಸಿಕೊಳ್ಳುವುದು ಇರುವೆಗಳ ವಿಶೇಷ.

**-ಜಗದೀಶ ಎಂ. ಸಂಗಣ್ಣವರ, ಬೈಲಹೊಂಗಲ**

